**ಸಿಸಿ ನಂಃ 26/2022**

**ಚಾಸಾ–1**

**ಪ್ರಾಸಾ–1**

**<u>ದಿನಾಂಕಃ 25.09.2025 ರಂದು ಪುನಃ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು</u>**

**<u>ಪಾಟಿ ಸವಾಲು ಶ್ರೀಮತಿ ಬಿ ಟಿ ಎಸ್ ., 1 ನೇ ಆರೋಪಿ ಪರ ವಕೀಲರಿಂದ</u>**

ಮಹಜರಿಗೆ ಹಾಜರಾಗಲು ನನಗೆ ನೋಟೀಸ್ ನೀಡಿರುವುದಿಲ್ಲ. ನನ್ನನ್ನು ಕರೆದಾಗ ನಾನು ಚಳ್ಳಕೆರೆ ಟೌನಿನ ನನ್ನ ಮನೆಯಲ್ಲಿ ಇದ್ದೆ. ಸುಮಾರು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಚಾಸಾ–3 ರವರು ನನಗೆ ದೂರವಾಣಿ ಕರೆ ಮಾಡಿರುತ್ತಾರೆ. ಚಾಸಾ–2 ರವರು ನಾನು ಬರುವ ಮುಂಚೆಯೇ ಚಾಸಾ–3 ರವರ ಜೊತೆ ಇದ್ದರು. ತಹಸೀಲ್ದಾರ್ ರವರು ಸದರಿಯವರ ಜೀಪಿನಲ್ಲಿ ಕುಳಿತುಕೊಳ್ಳಲು ಹೇಳಿದ್ದರು. ಸದರಿ ಜೀಪಿನ ನೊಂದಣಿ ಸಂಖ್ಯೆ ಹೇಳಲು ಆಗುವುದಿಲ್ಲ. ಪೊಲೀಸರು ಆಗಲೇ ಕೃತ್ಯ ನಡೆದ ಸ್ಥಳದಲ್ಲಿ ಇದ್ದರು. ನಾನು, ಚಾಸಾ–2 ಮತ್ತು 3 ರವರು ಜೀಪಿನಲ್ಲಿ ಸ್ಥಳಕ್ಕೆ ಹೋದೆವು. ಪೊಲೀಸರು ಮುಂಚೆಯೇ ಅವರ ವಾಹನದಲ್ಲಿ ಹೋಗಿದ್ದರು. ಪೊಲೀಸರು ಹೋಗಿದ್ದ ವಾಹನದ ನೊಂದಣಿ ಸಂಖ್ಯೆ ಹೇಳಲು ಆಗುವುದಿಲ್ಲ. ನಾನು ಚಾಸಾ–2 ಮತ್ತು 3 ರವರು ಸ್ಥಳಕ್ಕೆ ಹೋಗಿದ್ದಾಗ ಸುಮಾರು 10.30 ರಿಂದ 11.00 ಗಂಟೆ ಆಗಿತ್ತು. ಪೊಲೀಸರು ಎಷ್ಟು ಗಂಟೆಗೆ ಕೃತ್ಯ ನಡೆದ ಸ್ಥಳಕೆ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋದಾಗ ಸುಮಾರು 15–20 ಜನ ಗುಂಪು ಕಟ್ಟಿಕೊಂಡಿದ್ದರು. ಸದರಿಯವರ ಹೆಸರು ವಿಳಾಸ ಹೇಳಲು ಆಗುವುದಿಲ್ಲ. ನಾವು ಹೋಗಿದ್ದ ಸ್ಥಳದ ಚಕ್ಕುಬಂದಿಯನ್ನು ಹೇಳಲು ಆಗುವುದಿಲ್ಲ. ಸ್ಥಳದಲಿಲದ್ದ ಡಬ್ಬ ಅಂಗಡಿ ಯಾರಿಗೆ ಸೇರಿರುತ್ತದೆ ಎಂದು ಹೇಳಲುಆಗುವುದಿಲ್ಲ. ಸದರಿ ಡಬ್ಬ ಅಂಗಡಿಯಲ್ಲಿ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಡಬ್ಬ ಅಂಗಡಿಯ ಅಕ್ಕಪಕ್ಕ ಖಾಲಿ ಜಾಗಗಳು ಇರುತ್ತವೆ. ಸ್ಥಳದಲ್ಲಿದ್ದ ಸಾರ್ವಜನಿಕರ ಸಹಿಯನ್ನು ಪಡೆದಿರುವುದಿಲ್ಲ. ಆರೋಪಿಯು ನನ್ನ ಸಮಕ್ಷಮ ಯಾವುದೇ ಹೇಳಿಕೆಯ್ನು ನೀಡಿರುವುದಿಲ್ಲ. ನಾನು ಪೊಲೀಸರ ಜೊತೆ ಸುಮಾರು 5–10 ನಿಮಿಷಗಳ ಕಾಲ ಇದ್ದೆವು. ಪೊಲೀಸರು ಅವರ ಜೊತೆ ಏನನ್ನು ತೆಗೆದುಕೊಂಡು ಹೋಗಿದ್ದರು ಎಂದು ಹೇಳಲು ಆಗುವುದಿಲ್ಲ. ನಿಪಿ.3 ರ ಭಾವಚಿತ್ರವನ್ನು ಪೊಲೀಸರು ತೆಗೆದಿರುತ್ತಾರೆ, ಯಾರು ಯಾವ ಕ್ಯಾಮೆರಾದಲ್ಲಿ ತೆಗೆದಿರುತ್ತಾರೆ ಎಂದು ನಿಖರವಾಗಿ ಹೇಳಲು. ಪೊಲೀಸರು ನನ್ನ ಸಮಕ್ಷಮ ಏನನ್ನು ವಶಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.1 ರಲ್ಲಿ ಏನು ಬರೆದಿದೆ ಎಂದು

ನನಗೆ ಗೊತ್ತಿಲ್ಲ. ನಿಪಿ.1 ಅನ್ನು ಯಾರು ಎಲ್ಲಿ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.1 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ.

ವಶಪಡಿಸಿಕೊಂಡ ಗಾಂಜಾಗಳು ಎಷ್ಟು ತೂಕ ಇತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ತೂಕ ಹಾಕಿದ ಕವರಿನಲ್ಲಿದ್ದ ವಸ್ತುಗಳು ಹಸಿರು ಹಾಗೂ ಕೆಂಪು ಬಣ್ಣದಿಂದ ಕೂಡಿತ್ತು. ಸ್ಥಳದಲ್ಲಿ ಕವರನ್ನು ತೂಕ ಮಾಡಿದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಸುಮಾರು 10.45 ರಿಂದ 11.00 ಗಂಟೆ ಸಮಯದಲ್ಲಿ ಪೊಲೀಸರು ತೂಕ ಮಾಡುವವರನ್ನು ಸ್ಥಳಕ್ಕೆ ಕರೆಸಿದ್ದರು. ಅಮಾನತ್ತು ಪಡಿಸಿಕೊಂಡ ವಸ್ತುಗಳ ಚೀಲದ ಮೇಲೆ ನಾನು ಸಹಿ ಹಾಕಿರುವುದಿಲ್ಲ. ನಿಪಿ.1 ಕ್ಕೆ ನಾನು, ಚಾಸಾ–2 ಮತ್ತು 3 ರವರು ಠಾಣೆಯಲ್ಲಿ ಸಹಿ ಮಾಡಿರುತ್ತೇವೆ. ಪೊಲೀಸರಿಗೆ ಯಾವಾಗ ಬಾತ್ಮಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.

ದಿನಾಂಕ 26.04.2021 ರಂದು ಬಾತ್ಮಿ ಬಂದ ವೇರೆಗೆ ಪೊಲೀಸರು ಪಂಚರಾಗಿ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಪೊಲೀಸರು ಯಾರನ್ನು ಹಿಡಿದುಕೊಂಡಿರುವುದಿಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿ ಓಡಿ ಹೋದ ಬಗ್ಗೆ ಪೊಲೀಸರು ಹೇಳಿದ ಮೇರೆಗೆ ನನಗೆ ತಿಳಿದಿರುತ್ತದೆ. ಮು.ಮಾ–5 ತರಹದ ವಸ್ತು ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಪೊಲೀಸರು ನನ್ನ ಸಮಕ್ಷಮ ಯಾರನ್ನು ದಸ್ತಗಿರಿ ಮವಾಡಿಲ್ಲ ಎಂದರೆ ಸರಿ. ಪೊಲೀಸರು ನನ್ನ ಸಮಕ್ಷಮ ಗಾಂಜವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ನಾನು ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಮಾನ್ಯ ಸರ್ಕಾರಿ ವಕೀಲರು ಪಾಟೀ ಸವಾಲಿನಲ್ಲಿ ಕೇಳಿದ ವಿಚಾರಗಳಿಗೆ ನಾನು ಉತ್ತರಿಸಿದ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸರ್ಕಾರಿ ನೌಕರನಾಗಿ ನಿಪಿ.1 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ ಕಾರಣ ಪೊಲೀಸರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು ಶ್ರೀ ಎನ್ ಟಿ ಎಸ್ ., 2 ನೇ ಆರೋಪಿ ಪರ ವಕೀಲರಿಂದ**

1 ನೇ ಕವರಿನಲ್ಲಿದ್ದ ಗಾಂಜಾ ಸೊಪ್ಪಿನ ಉದ್ದ, ಅಳತೆ ಆಕಾರವನ್ನು ನಿಖರವಾಗಿ ಹೇಳಲು ಸಾಧ್ಯವೇ ಎಂದರೆ ಸಾಕ್ಷಿಯು 1 ರಿಂದ 1 ½ ಇಂಚು ಉದ್ದ ಇತ್ತು ಎಂದು ನುಡಿಯುತ್ತಾರೆ , 2 ರಿಂದ 4 ನೇ ಕವರಿನಲ್ಲಿದ್ದ ಗಾಂಜಾ ಸೊಪ್ಪು ಹಸಿರು ಹಾಗೂ ಒಣಗಿದ ಹುಲ್ಲಿನ ಬಣ್ಣದಲ್ಲಿತ್ತು. ಸದರಿ ವಿಚಾರವಾಗಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೇಲಾಧಿಕಾರಿಗಳ ಮಾತು ಕೇಳಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(2 ನೇ ಪರ ವಕೀಲರು 1 ನೇ ಆರೋಪಿ ಪರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.** )

ಮರು **ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ